ಫಾರೆಸ್ಟ್ ಇಲಾಖೆ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 24ನೆ ಆಗಸ್ಟ್, 1907ನೆ ಇಸವಿ.

ಈ ಕೆಳಕಂಡ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ :—ಮೈಸೂರು ಸರಕಾರದ ಕೈಗಂಧದ ಸಾಲಿಯಾನ ಸಾದಿತಕ್ಕೆ ಹರಾಜು ಕೆಳಗೆ ನಮೂದಿರುವ ಕೋಠಿಗಳಲ್ಲಿ ಎದುರಗಡೆ ಪೇಜುವಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡಿಪ್ಯುಟಿ ಕಮೀಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಸರುಗಳಿಂದ ನಡಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಸ್ಟುವರು ಮೊತ್ತ.
			ಟನ್‌ಗಳು.
ಶಿವಮೊಗ್ಗ ...	ತೀರ್ಥಹಳ್ಳಿ ...	18ನೆ ನವೆಂಬರ್ 1907 ...	200
ಡಿಟೋ ...	ಸಾಗರ ...	21ನೆ ಡಿಟೋ ...	150
ಡಿಟೋ ...	ಶಿವಮೊಗ್ಗ ...	25ನೆ ಡಿಟೋ ...	500
ಕಡೂರು ...	ತರೀಕೆರೆ ...	28ನೆ ಡಿಟೋ ...	250
ಡಿಟೋ ...	ಚಿಕ್ಕಮಗಳೂರು ...	2ನೆ ಡಿಸೆಂಬರ್ 1907. ...	350
ಹಾಸನ ...	ಹಾಸನ ...	5ನೆ ಡಿಟೋ ...	150
ಬೆಂಗಳೂರು ...	ಬೆಂಗಳೂರು ...	9ನೆ ಡಿಟೋ ...	100
ಮೈಸೂರು ...	ಶ್ರೀರಂಗಪಟ್ಟಣ ...	12ನೆ ಡಿಟೋ ...	250
ಡಿಟೋ ...	ಹುಣಸೂರು ...	16ನೆ ಡಿಟೋ ...	500
		ಜುಮ್ಲಾ ...	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ತಾಲ್ಲೂಮಾರು ಲಟ್ಟು, ಮೊತ್ತ ಮತ್ತು ಇತರ ತಪಶೀಲುಗಳು ಒರುವ ಅಕ್ಕೌಂಟ್ ಮಾಹೆಯ ಆಖೈರಾನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕಂಸರ್ವೇಟರ್ ಆಫ್ ಫಾರೆಸ್ಟ್ಸ್, ಇ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ಅಬಸ್ಟ್ಯಾಕ್ಟ್ ನೋಟಿಫಿಕೇಷನ್.

ನೆಲಮಂಗಲದ ತಾಲ್ಲೂಕು ದಾಸನಪುರದ ಹೋಬಳಿಗೆ ಸೇರಿದ ಜೋಡಿ ಕಮ್ಮಸಂದ್ರ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನೆಲಮಂಗಲದ ತಾಲ್ಲೂಕು ಕಛೇರಿಯಲ್ಲಿ 1908ನೆ ಇಸವಿ ಜನವರಿ 6ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ 1907ನೆ ಇಸವಿ ಡಿಸೆಂಬರ್ 3ನೆ ಮಕ್ಕಂ 48ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 561ನೆ ನಂಬರ್ ಪೇಜು ನೋಡತಕ್ಕದ್ದು.

ಡಿ. ದೇವರಾಜೆ ಅರಸ್.
ಡೆಪ್ಯುಟಿ ಕಮೀಷನರ್.

ಮೈಸೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್‌ನಾಮೆ.

ತಾರೀಖು 14ನೆ ನವೆಂಬರ್ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಮೂಗೂರು ಹೋಬಳಿಗೆ ಸೇರಿದ ಕಾಯಂಗುತ್ತಾ ಹ್ಯಾಕ್ಸನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೆ ಜನವರಿ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ 1907ನೆ ನವಂಬರ್ 28ನೆ ಮಕ್ಕಂ 47ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 554ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಶಾಂತರಾಜೆ ಅರಸ್.
ಡೆಪ್ಯುಟಿ ಕಮೀಷನರ್.